| | | | |
|---|---|---|---|
| ೧. | ಯೋಜನೆ | ೧೦೦,೨೯,೨೨ | ಲಕ್ಷ ರೂ.ಗಳು |
| ೨. | ಯೋಜನೇತರ | ೪೪,೪೯,೪೪ | ಲಕ್ಷ ರೂ.ಗಳು |
| ೩. | ವಿಶೇಷ ಘಟಕ ಯೋಜನೆ | ೩೦೩೮೧.೭೫ | ಲಕ್ಷ ರೂ.ಗಳು |
| ೪. | ಗಿರಿಜನ ಉಪಯೋಜನೆ | ೪೬೩೯.೬೯ | ಲಕ್ಷ ರೂ.ಗಳು |
| | **ಒಟ್ಟು** | **೪೯೫೦೦.೧೦** | **ಲಕ್ಷ ರೂ.ಗಳು** |

ಆ) ಹೌದು. ನಿಗದಿಪಡಿಸಿದ ಹಣದಲ್ಲಿ ಶೇಕಡ ೯೨.೭೮ ರಷ್ಟು ಖರ್ಚಾಗಿದೆ. ಆದರೆ ಕೆಲವೊಂದು ಹೊಸ ಯೋಜನೆಗಳ ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡುವುದು ತಡವಾದ ಕಾರಣ ಹಾಗೂ ಆರ್ಥಿಕ ಮಿತಿ ನಿರ್ಬಂಧವಿದ್ದುದರಿಂದ ಪೂರ್ತಿ ಹಣ ಬಿಡುಗಡೆಯಾಗದ ಪ್ರಯುಕ್ತ ಕೆಲವು ಯೋಜನಾ ಕಾರ್ಯಕ್ರಮಗಳಡಿಯಲ್ಲಿ ಖರ್ಚು ಕಡಿಮೆಯಾಗಿರುತ್ತದೆ.

## ವಿಜಾಪುರ ಪೌರ ಕಾರ್ಮಿಕರ ಬಗ್ಗೆ

೫೭೫ - ಶ್ರೀ ಬಸವನಗೌಡ ಪಾಟೀಲ್ (ಬಿಜಾಪುರ) : ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ವಿಜಾಪುರ ನಗರಸಭೆಯಲ್ಲಿ ಇರುವ ಪೌರ ಕಾರ್ಮಿಕರ ಸಂಖ್ಯೆ ಎಷ್ಟು?*

*ಆ) ವಿಜಾಪುರ ನಗರಸಭೆಯಲ್ಲಿ ಕಸ ಗುಡಿಸುವವರು (ಸ್ವೀಪರ್) ಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಇ) ಹಾಗಿದ್ದಲ್ಲಿ ಈ ಕೊರತೆ ನೀಗಲು ಸರ್ಕಾರ ಕೈಗೊಂಡು ಕ್ರಮಗಳು ಏನು?*

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ, ಕಾಡಾ, ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು).

ಅ) ೨೯೦.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

## ವಿಜಾಪುರ ನಗರದ ಮನೆ ತೆರಿಗೆ ಕುರಿತು

೫೭೬ - ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) : ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?